ಮರೆತೋ ಅಥವಾ ವಿಧಿಯ ಆಟದಿಂದಲೋ ಅನೇಕ ಅವಘಡಗಳಿಗೆ ಕಾರಣವಾಗುತ್ತದೆ. ಒಂದು ಸರ್ತಿ ನಿದ್ದೆಗಣ್ಣಿನಲ್ಲಿ ಬಸ್ಸು ಓಡಿಸುವ ಡ್ರೈವರನ್ನು ಹತ್ತಿರದಿಂದ ನೋಡಿದ್ದೆ. ನಿದ್ದೆಯಲ್ಲೂ ಬಸ್ಸು ಓಡಿಸುವ ಅವನ ಕಲೆಗೆ ಬೆರಗಾಗುತ್ತಲೇ, ಸರಿಯಾಗಿ ನಿಲ್ದಾಣ ತಲುಪಿಸುವನೋ? ಅಂತ ಭಯಭೀತಳಾಗಿದ್ದೆ. ಅಲ್ಲೊಂದು ಇಲ್ಲೊಂದು ಅನಾಹುತಗಳು ಆದರೂ ಪ್ರಯಾಣಿಕರು ಅನಾಮಿಕ ಚಾಲಕನ ನಂಬಿಯೇ ಬಸ್ಸು ಹತ್ತುತ್ತಾರೆ.

ಓದು ಮುಗಿಸಿ ನಾನು ಮದುವೆಯಾಗಿ ಬಂದದ್ದು ಕೃಷಿ ಕುಟುಂಬಕ್ಕೆ. ಆಗ ಅಪರೂಪಕ್ಕೆ ಯಾವತ್ತೋ ಒಂದೆರಡು ಮದುವೆಗಳಿಗಷ್ಟೇ ಹೋಗುವ ಅವಕಾಶ. ಮನೆಕೆಲಸ ಮುಗಿಸಿ ಜೀಪಿನಲ್ಲೋ, ಕಾರಿನಲ್ಲೋ ಸರಿಯಾಗಿ ಊಟದ ಸಮಯಕ್ಕೆ ಹೋಗಿ ಬಂದು ಬಿಡುತ್ತಿದ್ದೆವು. ಅಲ್ಲಿ ಸಿಕ್ಕವರೊಂದಿಗೆ 'ನಮಸ್ಕಾರ, ಚೆನ್ನಾಗಿದ್ದೀರಾ...' ಅಷ್ಟರೊಳಗೆ ಮಾತು ಮುಗಿದು ಹೋಗುತ್ತಿತ್ತು. ಈ ಅಡುಗೆ ಮನೆ, ಬೆಂಕಿ ಹೊಗೆಯ ನಡುವೆ ಬೇಸತ್ತು ಹೊಸತನಕ್ಕೆ ಹಂಬಲಿಸಿ ಅಕ್ಷರದ ತೆಕ್ಕೆಗೆ ಬಿದ್ದೆ. ಒಂದಷ್ಟು ಕಥೆ- ಕವಿತೆ ಬರೆದು, ಪತ್ರಿಕೆಗಳ ವಿಳಾಸಕ್ಕೆ ಲಕೋಟೆಯಲ್ಲಿಟ್ಟು ಅಂಚೆ ಡಬ್ಬಿಗೆ ಹಾಕಿದೆ. ಟಪಾಲು ಗುದ್ದಿದ ಲಕೋಟೆಯನ್ನು ಈ ಕೆಂಪು ಬಸ್ಸೇ ಹೊತ್ತುಕೊಂಡು ತಲುಪಿಸಿತು. ಕವಿತೆ ಸಂಪಾದಕರಿಗೆ ಮೆಚ್ಚಾಗಿ ಪತ್ರಿಕೆಯಲ್ಲಿ ಅಚ್ಚಾಗಿ ಬರುವಾಗ ನನಗೊಂದು ಸಣ್ಣ ಮಟ್ಟಿನ ಗುರುತಿಸುವಿಕೆಗೆ ಬಸ್ಸೊಂದು ರಾಯಭಾರಿಯೂ ಆಯಿತು. ನಂತರ ಅಲ್ಲೊಂದು ಇಲ್ಲೊಂದು ಗೋಷ್ಠಿಗೆ, ಭಾಷಣಕ್ಕೆ ಆಮಂತ್ರಣವಿರುತ್ತಿತ್ತು. ಪ್ರತೀ ಸಾರಿ ಒಲ್ಲೆ ಎನ್ನಲಾಗುತ್ತಿರಲಿಲ್ಲ. ಜೀಪು ಕಾರಲ್ಲಿ ಕತೆಗಿತೆ ಅಂತ ತಿರುಗಿದರೆ ಅಸಲು ಆಗಲಿಕ್ಕಿಲ್ಲ, ಬದುಕಲು ಭಾವನೆಯಷ್ಟೇ ಸಾಲದು, ಲೆಕ್ಕಚಾರವೂ ಇರಬೇಕಾಗುತ್ತದೆ ಅಂತ ಲೆಕ್ಕ ಹಾಕಿ ಸರ್ಕಾರಿ ಬಸ್ಸನ್ನೇ ನೆಚ್ಚಿಕೊಂಡೆ. ಒಬ್ಬಳೇ ಹೋಗಿ ಬರುವುದು ರೂಢಿಸಿಕೊಂಡೆ.

ಈಗಂತೂ ಬಸ್ಸುಗಳಿಗೆ ಬರವಿಲ್ಲ. ನಮ್ಮೂರಿಂದ ಅತ್ತ ಕೊಡಗು, ಮೈಸೂರು, ಬೆಂಗಳೂರಿಗೂ ಇತ್ತ ಮಂಗಳೂರು, ಧರ್ಮಸ್ಥಳ, ಕುಂದಾಪುರದವರೆಗೂ ಅರ್ಧಗಂಟೆಗೊಂದು ಓಡುತ್ತದೆ. ನನಗೆ ಇಲ್ಲಿ ಹತ್ತಿ ಅಲ್ಲಿ ಇಳಿಯುವುದೆಂದರೆ ಆಗಿ ಬರುವುದಿಲ್ಲ. ದೀರ್ಘ ಪ್ರಯಾಣವೇ ಹೆಚ್ಚು ಮುದ ಕೊಡುವುದು. ಅದು ಕಿಟಕಿ ಬದಿ ಸೀಟು ಸಿಕ್ಕಿದರಂತೂ ನನ್ನ ಕನಸಿಗೆ ಎಲ್ಲೆ ಇಲ್ಲ. ಪಯಣಿಸುವಾಗ ಯಾರೂ ಮಾತನಾಡಿಸದಿದ್ದರಂತೂ ಬಹಳ ಉಪಕಾರ. ಇವತ್ತಿಗೂ ಕಿಟಕಿ ಬದಿಯಲ್ಲಿ ಕುಳಿತು ಮರಗಿಡಗಳು ಹಿಂದಕ್ಕೆ ಚಲಿಸುವುದನ್ನು ನೋಡುವುದು ಬೆರಗೇ.

ನಾನು ಸಾಹಿತ್ಯದ ಕಾರ್ಯಕ್ರಮಗಳಿಗೆ ಬೆಂಗಳೂರಿಗೆ ಹೋಗಬೇಕಾದರೂ ಸರ್ಕಾರಿ ಬಸ್ಸನ್ನೇ ಏರುವುದು. ಯಾಕೆ ಆರಾಮದಲ್ಲಿ ಡಿಲಕ್ಸ್ ಬಸ್ಸಲ್ಲಿಯೋ ಅಥವಾ ಸ್ಲೀಪರ್‌ನಲ್ಲಿಯೋ ಹೋಗ ಬಾರದಾ? ಅಂತ ಆತ್ಮೀಯರು ಪ್ರಶ್ನಿಸುವುದುಂಟು. ಕಿಟಕಿ ಮುಚ್ಚಿಕೊಂಡು ಹೋಗುವುದು, ರಾತ್ರೆ ನಿದ್ದೆ ಮಾಡಿಕೊಂಡು ಪಯಣಿಸುವುದು ನನ್ನ ಉದ್ದೇಶ ಅಲ್ಲ. ಪ್ರತೀ ಊರನ್ನು, ಅಲ್ಲಿಯ ತಂಗುದಾಣವನ್ನು, ಅಲ್ಲಿರುವ ಜನರನ್ನು, ಅವರ ವ್ಯಕ್ತಿತ್ವವನ್ನು ಅರೆಗಳಿಗೆಯಾದರೂ ಹಿಡಿದಿಟ್ಟುಕೊಳ್ಳಲು ಸಾಧ್ಯವಾಗುವುದು ಕೆಂಪು ಬಸ್ಸಿನಲ್ಲಿಯೇ. ಕಿಟಕಿಗೆ ತಲೆಯಾನಿಸಿದರೆ ಸಾಕು, ಹೊರಗಿನ ಬೀಸುಗಾಳಿ ಅಲೆಅಲೆಯಾಗಿ ಅನೇಕ ನೆನಪುಗಳನ್ನ ಮಡಿಲಿಗೆ ತಂದು ಹಾಕುತ್ತವೆ. ನೆನಪುಗಳ ಒತ್ತಡಕ್ಕೆ ಕೆಲವೊಮ್ಮೆ ಸಣ್ಣಕೆ ಜೊಂಪು ಹತ್ತುತ್ತದೆ. ಆ ನಿದ್ದೆಯೊಂದು ಸುಖದ ಅಮಲು. ಅನೇಕರಿಗೆ ಬಸ್ಸಿನಲ್ಲಿ ಪ್ರಯಾಣಿಸುವುದೆಂದರೆ ಆಯಾಸವಂತೆ. ಮತ್ತೆ ಮನೆಗೆ ಹೋಗಿ ನಾಲ್ಕು ದಿನ ವಿಶ್ರಾಂತಿಯೆನ್ನುವುದು ಕೇಳಿದ್ದೆ. ನನಗೋ ಪ್ರಯಾಣ ಆಯಾಸ ಪರಿಹರಿಸಿಕೊಳ್ಳುವ ಮಾರ್ಗ. ದೀರ್ಘ ಬಸ್ಸು ಪ್ರಯಾಣ ಏಕಾಂತಕ್ಕೆ ಸಾಗುವ ರಹದಾರಿ. ನಾನು ಆ ಕ್ಷಣದಲ್ಲಿ ಓದುವುದಾಗಲಿ, ಹರಟೆ ಹೊಡೆಯುವುದಾಗಲಿ ಮಾಡುವುದಿಲ್ಲ. ಹೊರಗೂ ಒಳಗೂ ಅನುಸಂಧಾನಕ್ಕೆ ಇಳಿಯುವ ಧ್ಯಾನದ ಗಳಿಗೆ ಅದು.

ನನ್ನ ಗೆಳತಿಗೋ ಪ್ರಯಾಣ ವೇಳೆಯಲ್ಲಿ ಪುಸ್ತಕ ಓದುವ ಹುಚ್ಚು. ಅವಳು ನನ್ನಂತೆ ಕೃಷಿಕ ಮಹಿಳೆಯಾದರೂ ಅವಳು ಇಡೀ ಪ್ರಯಾಣದುದ್ದಕ್ಕೂ ಓದಿಕೊಂಡೇ ಇರುತ್ತಾಳೆ. ಕೇಳಿದರೆ ಮನೆಯಲ್ಲಿ ಪುರುಸೊತ್ತು ಸಿಗುವುದಿಲ್ಲವೆಂದು ನಗುತ್ತಾಳೆ.